- - ಓ ಎಸ್ ನಂ.135/2019

ಡಿ .ಡಬ್ಲ್ಯೂ :1

ದಿನಾಂಕ :02-04-2025 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು

<u>ಮುಂದುವರೆದ ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ</u>

ಜಿ ಅರಿವೇಸಂದ್ರ ಗ್ರಾಮದ ಸರ್ವೆ ನಂ. 17/2 ರ ಸ್ವತ್ತು ಕಾಳೇಗೌಡರವರಿಗೆ ಸೇರಿದ್ದಾಗಿದೆ . ಬಸವೇಗೌಡ ನನ್ನ ತಾತ .ಪಟೇಲ್ ಸಿದ್ದನಂಜೇಗೌಡ ನನ್ನ ಮುತ್ತಾತ . ನನ್ನ ಮುತ್ತಾತ ಪಟೇಲ್ ಸಿದ್ದನಂಜೇಗೌಡ ರವರು ಊರಿನ ಪಟೇಲರಾಗಿದ್ದರು ಅವರು ಎಲ್ಲಾ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ . ನನ್ನ ತಾತ ಮತ್ತು ಮುತ್ತಾತ ಕಾಲದಿಂದಲೂ ವಾದಿಗಳು ದಾವಾ ಸ್ವತ್ತಿನ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ . ನಾವು ಕಂದಾಯ ದಾಖಲೆಗಳನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಹೇಮಾವತಿ ಚಾನಲ್‌ಗೆಂದು ಭಾಗಾಶಃ ಸ್ವತ್ತನ್ನು ಸರ್ಕಾರಕ್ಕೆ ವಶಪಡಿಸಿಕೊಳ್ಳಲಾಗಿದೆ ಎಂದರೆ ನಮ್ಮ ಸ್ವತ್ತನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಸಾಕ್ಷಿ ಹೇಳಿದ್ದಾರೆ . ನಮ್ಮ ಸ್ವತ್ತನ್ನು ವಶಪಡಿಸಿಕೊಳ್ಳಲಾಗಿದೆ ಎಂಬುದಾಗಿ ದಾಖಲೆಗಳನ್ನು ಸೃಷ್ಟಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ವಾದಿಗಳಿಗೆ ತಿಳಿಯದಂತೆ ದಾಖಲೆಗಳನ್ನು ಸೃಷ್ಟಿಸಿಕೊಂಡು ಅಧಿಕಾರಿಗಳೊಡನೆ ಶಾಮೀಲಾಗಿ ಭೂ ಸ್ವಾಧೀನದ ಸಂಬಂಧ ಬಂದಿರುವ ಪರಿಹಾರ ಹಣವನ್ನು ಪಡೆದುಕೊಂಡಿದ್ದೇವೆ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ರಾಷ್ಟ್ರೀಯ ಹೆದ್ದಾರಿಗಾಗಿ ಭೂ ಸ್ವಾಧೀನ ಪಡಿಸಿಕೊಳ್ಳಲಾಗಿತ್ತು ಎಂದರೆ ಸರಿ . ಆ ಸಮಯ ವಾದಿಗಳು ಸದರಿ ಸ್ವತ್ತಿಗೆ ಸಂಬಂಧಿಸಿ ಪರಿಹಾರದ ಹಣವನ್ನು ನಮಗೆ ನೀಡಬೇಕೆಂದು ಅರ್ಜಿ ಸಲ್ಲಿಸಿದ್ದರು ಎಂದರೆ ಸರಿಯಲ್ಲ . ಸದರಿ ಪರಿಹಾರದ ಹಣವನ್ನು ಇನ್ನೂ ಯಾರಿಗೂ ನೀಡಿಲ್ಲ ಎಂದರೆ ಸಾಕ್ಷಿಯು ನನ್ನ ಅಣ್ಣ ಬಸವರಾಜು ಬಿನ್ ಕಾಳೇಗೌಡ ಮರಣ ಹೊಂದಿದ್ದಾರೆ ಆದುದರಿಂದ ನಮ್ಮ ನಡುವೆ ಸಣ್ಣ ಮನಸ್ತಾಪ ಉಂಟಾಗಿದೆ , ಆ ಕಾರಣ ಹಣ ನೀಡಿಲ್ಲ ಎಂದು ಉತ್ತರಿಸಿದ್ದಾರೆ . ಸುಳ್ಳು ವಿವರಗಳನ್ನು ಹೇಳುತ್ತಿದ್ದೇನೆ , ನಮ್ಮ ಮತ್ತು ವಾದಿಗಳ ನಡುವೆ ದಾವಾ ಸ್ವತ್ತಿಗೆ ಸಂಬಂಧಿಸಿ ವ್ಯಾಜ್ಯ ಇರುವ ಕಾರಣ ಹಣ ನೀಡಿಲ್ಲ ಎಂದರೆ ಸರಿಯಲ್ಲ. ನನ್ನ ಅಣ್ಣನ ಮರಣದ ಕಾರಣ ಪರಿಹಾರದ ಹಣ ನೀಡಿಲ್ಲ ಎಂದು ತೋರಿಸಲು ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ .

ದಾವಾ ಸ್ವತ್ತಿನ ಪಹಣಿಗೆ ಸಂಬಂಧಿಸಿ ವಾದಿಗಳು ಎ ಸಿ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದರು ಎಂದರೆ ಸರಿ . ಸದರಿ ಮೇಲ್ಮನವಿಯಲ್ಲಿ ಸಿವಿಲ್ ನ್ಯಾಯಾಲಯದಲ್ಲಿ ದಾವಾ ಸ್ವತ್ತಿನ ಮಾಲಿಕತ್ವ ನಿರ್ಧರಿಸಿಕೊಳ್ಳಬೇಕೆಂದು ತಿಳಿಸಲಾಗಿದೆ ಎಂದರೆ ಸರಿ . ದಾವಾ ಸ್ವತ್ತಿನ ಉತ್ತರ ದಿಕ್ಕಿಗೆ ನಮ್ಮ ಸ್ವತ್ತು ಇದೆ ಎಂದರೆ ಸರಿ . ದಾವಾ ಸ್ವತ್ತಿನ ಪೂರ್ವ ಕ್ಕೆ ಬಣಗಾರ ಮುದ್ದಯ್ಯ ರವರ ಸ್ವತ್ತು ಇದೆ ಎಂದರೆ ಸರಿ . ದಾವಾ ಸ್ವತ್ತಿನ ಪಶ್ಚಿಮ ದಿಕ್ಕಿಗೆ ಸರ್ವೆ ನಂ. 18 ರಲ್ಲಿ ವಾದಿಗಳಿಗೆ ಸೇರಿದ ಉಳಿಕೆ ಸ್ವತ್ತು ಇದೆ ಎಂದರೆ ಸಾಕ್ಷಿಯು ಉಳಿಕೆ ಸ್ವತ್ತು ಇರುವುದು ನಿಜ ಯಾರು ಸ್ವಾಧೀನದಲ್ಲಿದ್ದಾರೆ ಎಂದು ಗೊತ್ತಿಲ್ಲ ಎಂದು ಉತ್ತರಿಸಿದ್ದಾರೆ . ಸದರಿ ಸ್ವತ್ತಿನಲ್ಲಿ ವಾದಿಗಳು ಸ್ವಾಧೀನ ದಲ್ಲಿರುವುದು ತಿಳಿದಿದ್ದರೂ ಸಹಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ದಕ್ಷಿಣಕ್ಕೆ ಕಾಳೇಗೌಡರ ಸ್ವತ್ತು ಎಂದರೆ ಸರಿ . ನಿಡಿ -1 ರಿಂದ 29 ದಾಖಲೆಗಳನ್ನು ದಾವೆಗಾಗಿ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ನಮ್ಮ ಕುಟುಂಬಕ್ಕೆ ಹೇಗೆ ಬಂದಿದೆ ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ . ನನ್ನ ಮುತ್ತಾತ ಪಟೇಲರಾಗಿ ಕೆಲಸ ಮಾಡುತ್ತಿದ್ದ ಕಾರಣ ನಿಡಿ -1 ರಿಂದ 29 ದಾಖಲೆಗಳನ್ನು ಸೃಷ್ಟಿಸಿದ್ದಾರೆ ಎಂದರೆ ಸರಿಯಲ್ಲ . ದಾವಾ ಸ್ವತ್ತಿನ ಮೇಲೆ ನಮಗೆ ಯಾವುದೇ ಹಕ್ಕು ಮಾಲಿಕತ್ವ ಮತ್ತು ಸ್ವಾಧೀನ ಇರುವುದಿಲ್ಲ , ವಾದಿಗಳಿಗೆ ತೊಂದರೆ ನೀಡುವ ಉದ್ದೇಶದಿಂದ ಸೃಷ್ಟಿಸಿದ ದಾಖಲೆಗಳನ್ನು ಹಾಜರುಪಡಿಸಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮುಖ್ಯ ವಿಚಾರಣೆಯಲ್ಲಿ ಬರೆದಿರುವ ಎಲ್ಲಾ ವಿವರಗಳು ಸುಳ್ಳಿನಿಂದ ಕೂಡಿವೆ ಎಂದರೆ ಸರಿಯಲ್ಲ .

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓದಿ ಹೇಳಿ, ಕೇಳಿದೆ, ಸರಿ ಇದೆ, ಎಂದರು.

SD/-
(ಅನುಪಮ.ಡಿ. )
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಗುಬ್ಬಿ .